ಸಿ.ಸಿ. ನಂ.   184-2012

ದಿನಾಂಕಃ 07-08-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ ವಕೀಲರಿಂದಃ

1. ಆನಮೋಡ ತನಿಖಾ ಠಾಣೆಯಲ್ಲಿ 24 ಗಂಟೆ ಕಾಲ 10 ಜನ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಾರೆ. ದಿಃ 23-09-2012 ರಂದು 3 ಜನ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದರು. ಸದ್ರಿ ದಿನ ನನಗೆ ಯಾವ ಕರ್ತವ್ಯ ಇತ್ತು ಎಂದು ನನಗೆ ನೆನಪಿಲ್ಲಾ. ಉಳಿದ ಸಿಬ್ಬಂದಿಗಳ ಕರ್ತವ್ಯದ ಸಮಯ ನನಗೆ ಗೊತ್ತಿಲ್ಲ. ಕೇಲವರು 8 ಗಂಟೆ ಕಾಲ ಹಾಗೂ ಇನ್ನು ಕೇಲವರು 24 ಗಂಟೆಗಯ ಕಾಲ ಕರ್ತವ್ಯ ನಿರ್ವಹಿಸುತ್ತಾರೆ. ಸದ್ರಿ ದಿನ 24 ಗಂಟೆಗಳ ಕರ್ತವ್ಯದ ಪಾಳಿಯಲ್ಲಿದ್ದರು.

2. ಪ್ರಕರಣದ ವಾಹನವನ್ನು ತಪಾಸಣೆ ಮಾಡುವ ಮುಂಚೆ ಎಷ್ಟು ವಾಹನಗಳನ್ನು ತಪಾಸಣೆ ಮಾಡಿದ್ದೇವು ಎಂದು ಹೇಳಲು ಆಗುವುದಿಲ್ಲ. ವಾಹನದ ಬಗ್ಗೆ ನನಗೆ ಖಚಿತ ಮಾಹಿತಿ ಇದೆ. ಬಾತ್ಮಿಲ್ಲಿ ವಾಹನ ಸಂಖೆಯನ್ನು ತಿಳಿಸಿರುತ್ತಾರೆ. ವಾಹನ ಬರುವ ಅರ್ಧಗಂಟೆ ಮುಂಚಿತವಾಗಿ ನನಗೆ ಬಾತ್ಮಿ ಬಂದಿರುತ್ತದೆ. ನನಗೆ ದೂರವಾಣಿಯ ಮೂಲಕ ಬಾತ್ಮಿ ಬಂದಿರುತ್ತದೆ. ನನ್ನ ದೂರಿನಲ್ಲಿ ಬಾತ್ಮಿ ಹಾಗೂ ವಾಹನದ ಸಂಖ್ಯೆಯ ಬಗ್ಗೆ ನಮೂದು ಮಾಡಿಲ್ಲ. ಈ ಬಾತ್ಮಿ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿಲ್ಲ.

3. ಪ್ರಕರಣದ ವಾಹನವನ್ನು ತಪಾಸಣೆ ಮಾಡುವ ಮುಂಚಿತವಾಗಿ ಯಾವ ವಾಹನವನ್ನು ತಪಾಸಣೆ ಮಾಡುತ್ತಿದ್ದೆ ಎಂದು ನನಗೆ ನೆನಪಿಲ್ಲಾ. ವಾಹನವನ್ನು ನಮ್ಮ ತನಿಖಾ ಠಾಣೆಯ ಗೇಟನ ಬಳಿ ನಿಲ್ಲಿಸಿರುತ್ತಾರೆ. ಒಂದು ವಾಹನ ಬಂದು ನಿಂತಾಗ ಅದರ ಹಿಂದೆ ಇರುವ ವಾಹನಗಳು ಕಂಡು ಬರುತ್ತವೆ ಎಂದರೆ ಸರಿ. ಸುಮಾರು 50 ಮೀಟರ ದೂರದಲ್ಲಿರುವ ವಾಹನಗಳು ಕಂಡು ಬರುತ್ತವೆ. ವಾಹನವನ್ನು ಮೊದಲ ಬಾರಿಗೆ ನಮ್ಮ ಸಿಬ್ಬಂದಿಯವರು ನೋಡಿದ್ದು, ಅವರ ಹೆಸರು ನನಗೆ ನೆನಪಿಲ್ಲಾ. ವಾಹನದ ಯಾವೆಲ್ಲಾ ಭಾಗಗಳನ್ನು ಯಾವ ಸಿಬ್ಬಂದಿಯವರು ತಪಾಸಣೆ ಮಾಡಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಪ್ರಕರಣದ ವಾಹನದ ಬೋರ್ಡ

ಮೇಲೆ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ. ವಾಹನದ 2 ಬದಿಯಲ್ಲಿ ಹಾಗೂ ಹಿಂಬದಿಯಲ್ಲಿ ಮೇಲೆ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ. ವಾಹನದ ಒಳಗೆ ಯಾವ ಸಿಬ್ಬಂದಿಯವರು ಹೋಗಿ ನೋಡಿರುತ್ತಾರೆಂದು ಹೇಳಲು ಆಗುವುದಿಲ್ಲ. ಚಾಲಕನನ್ನ ನಾನೇ ಸುಮಾರು 9-00 ಗಂಟೆಗೆ ಅಂದಾಜು 5-10 ನಿಮಿಷಗಳ ಕಾಲ ವಿಚಾರಣೆ ಮಾಡಿರುತ್ತೇನೆ. ನಾನು ಖುದ್ದಾಗಿ ವಾಹನವನ್ನು ಹತ್ತಿ ಪರಿಶೀಲನೆ ಮಾಡಿಲ್ಲ. ಯಾವ ಸಿಬ್ಬಂದಿಯವರು ವಾಹನವನ್ನು ಹತ್ತಿ ತಪಾಸಣೆ ಮಾಡಿರುತ್ತಾರೆಂದು ನೆನಪಿಲ್ಲಾ.

4. ವಾಹನದ ಕ್ಯಾಬೀನ ಮೇಲೆ ಯಾವೆಲ್ಲಾ ವಸ್ತುಗಳು ಇದ್ದವು ಎಂದು ನಾನು ಪರಿಶೀಲನೆ ಮಾಡಿಲ್ಲ. ಪರಿಶೀಲನೆ ಮಾಡಲು ಯಾವುದೇ ತೊಂದರೆ ಇರಲಿಲ್ಲ. ವಾಹನದಲ್ಲಿ ಚಾಲಕ ಇರುವ ಕ್ಯಾಬೀನ ಸ್ಟೇರಿಂಗ್ ಬಳಿ ಮುದ್ದೆ ಮಾಲುಗಳು ಕಂಡು ಬಂದಿರುತ್ತವೆ. 21 ಬಾಕ್ಸ ಗಳನ್ನು ಒಂದರ ಮೇಲೆ ಒಂದಾಗಿ ಜೋಡಿಸಿ ಇಟ್ಟಿದ್ದರು. ಯಾವ ಯಾವ ರಿಟ್ಟನ ಬಾಕ್ಸ ಗಳಲ್ಲಿ ಯಾವ ಯಾವ ಮಧ್ಯ ಬಾಟಲಿಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಎಷ್ಟು ಸಾಲುಗಳಲ್ಲಿ ಬಾಕ್ಸಗಳನ್ನು ಇಟ್ಟಿದ್ದರು ಎಂದು ಹೇಳಲು ಆಗುವುದಿಲ್ಲ. ಒಂದು ಸಾಲಿನಲ್ಲಿ ಎಷ್ಟು ಬಾಕ್ಸಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ವಾಹನದ ಕ್ಯಾಬೀನ ಹಿಂಬದಿ ಖಾಲಿ ಇತ್ತು. ಸ್ವದ್ರಿ ವಾಹನಕ್ಕೆ ಸಂಬಂಧಿಸಿದ ದಾಖಲೆಗಳು ತೆಗೆದುಕೊಂಡಿರುವುದಿಲ್ಲ.

5. ಈ ವಾಹನವನ್ನು ಪರಿಶೀಲನೆ ಮಾಡುತ್ತಿರುವಾಗ ಬೇರೆ ವಾಹನಗಳು ಬಂದಿರ ಬಹುದು ನನಗೆ ಈಗ ನೆನಪಿಲ್ಲಾ. ಬಾಕ್ಸಗಳನ್ನು ಕಾಣುವ ರೀತಿಯಲ್ಲಿ ಇಟ್ಟಿದರು. ಗೋಣಿ ಚೀಲದಲ್ಲಿ ಯಾವ ರೀತಿಯ ಬರವಣಿಗೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದರ ಉದ್ದ ಅಗಲವನ್ನು ನನಗೆ ಹೇಳಲು ಆಗುವುದಿಲ್ಲ. ಬಾಕ್ಸಗಳ ಮೇಲೆ ಯಾವ ರೀತಿಯ ಬರವಣಿಗೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಸದ್ರಿ ಬರವಣಿಗೆಗಳನ್ನು ನಮೂದಿಸಿಲ್ಲ. ಆ ರೀತಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ಯಾವ ಯಾವ ಮಾದರಿಯ ಬಾಟಲಿಗಳನ್ನು ಯಾವ ಯಾವ ಸಾಲಿಗಳಲ್ಲಿ ಇಟ್ಟಿದ್ದರು ಎಂದು ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಗೋಣಿ ಚೀಲವನ್ನು ಜಪ್ತುಪಡಿಸಿಕೊಂಡಿಲ್ಲ.

6. ಸದ್ರಿ ಸಾಮಾನ್ಯವಾಗಿ ಘಟನಾ ಸ್ಥಳದಲ್ಲಿ ಕಂಡು ಬರುವಂತಹ ಎಲ್ಲಾ ವಸ್ತುಗಳನ್ನು

ಜಪ್ತುಪಡಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ವಾಹನದಲ್ಲಿ ಸ್ಟೆಪ್ನಿ ಇದ್ದ ಬಗ್ಗೆ ತಪಾಸಣೆ ಮಾಡಿಲ್ಲ. ವಾಹನದ ಟಾಯರುಗಳ ಸಂಖ್ಯೆಯನ್ನು ತಿಳಿದುಕೊಂಡಿಲ್ಲ. ಮಧ್ಯವನ್ನು ಹೊರತುಪಡಿಸಿ ವಾಹನಕ್ಕೆ ಸಂಬಂಧಿಸಿದ ಬಿಡಿ ಭಾಗಗಳು ಮತ್ತು ಇತರ ಸಾಮಾಗ್ರಿಗಳ ಬಗ್ಗೆ ತಪಾಸಣೆಯನ್ನು ಮಾಡಿಲ್ಲ. ಬಾಕ್ಸಗಳನ್ನು ತಪಾಸಣೆ ಮಾಡಲು ಎಷ್ಟು ಸಮಯ ತಾಗಿರುತ್ತದೆ ಎಂದು ನೆನಪಿಲ್ಲಾ. ಪ್ರತಿಯೊಂದು ಬಾಕ್ಸಗಳಲ್ಲಿ ಎಷ್ಟು ಮಧ್ಯದ ಬಾಟಲಗಳು ಇದ್ದವು ಎಂದು ನಾನು ಖುದ್ದಾಗಿ ತಪಾಸಣೆ ಮಾಡಿಲ್ಲ.

7. ಮಾದರಿ ಬಾಟಲಿಗಳನ್ನು ಪ್ರತಿ ಬಾಕ್ಸನಿಂದ ಒಂದೊಂದು ಬಾಟಲಿಗಳನ್ನು ತೆಗೆದಿರುತ್ತೇವೆ. ಮುದ್ದೆ ಮಾಲಗಳನ್ನು ನೋಡಿದರೆ ಅವುಗಳನ್ನು ಯಾವ ಯಾವ ಬಾಕ್ಸಗಳಿಂದ ತೆಗೆಯಲಾಗಿದೆ ಎಂದು ಹೇಳಲು ಆಗುತ್ತದೆ ಎಂದು ನುಡಿಯುತ್ತಾರೆ ರೆ.

8. ಆನಮೋಡದಲ್ಲಿ ಖನಿಜಾ ಇಲಾಖೆಯ ಹಾಗೂ ಅರಣ್ಯ ಹಾಗೂ ವಾಣಿಜ್ಯ ತೆರಿಗೆ ಇಲಾಖೆಗಳ ತನಿಖಾ ಠಾಣೆಗಳು ಇವೆ ಎಂದರೆ ಸರಿ. ಸದ್ರಿ ತನಿಖಾ ಠಾಣೆಗಳಲ್ಲಿ 24 ಗಂಟೆಗಳ ಕಾಲ ಸಿಬ್ಬಂದಿಯವರು ಕರ್ತವ್ಯದಲ್ಲಿ ಇರುತ್ತಾರೆ ಎಂದರೆ ಸರಿ. 2010-11 ರಲ್ಲಿ ಖನಿಜಾಗಳ ಸಾಗಾಟ ತೀವ್ರ ಸ್ವರೂಪದಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಆನಮೋಡದಲ್ಲಿ ಸಾಕಷ್ಟು ಅಂಗಡಿ ಮುಂಗಟ್ಟುಗಳು ಇವೆ ಎಂದರೆ ಸರಿ. ಪಂಚರನ್ನು ನಮ್ಮ ಸಿಬ್ಬಂದಿಯವರು ಕರೆತಂದಿರುತ್ತಾರೆ. ಪಂಚರು ನಮ್ಮ ಇಲಾಖೆಯ ದಿನಗೂಲಿ ನೌಕರರಾಗಿರುತ್ತಾರೆ. ಅವರು ಅ ಕಾಲಕ್ಕೆ ಸುಮಾರು 10-12 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅವರು ಇಲಾಖ ಸಿಬ್ಬಂದಿಗಳೆಂದು ನಮ್ಮ ಪಂಚನಾಮೆಯಲ್ಲಿ ನಮೂದಿಸಿಲ್ಲ. ಅದನ್ನು ನಮೂದಿಸಲು ಯಾವುದೇ ರೀತಿಯ ತೊಂದರೆ ಇರಲಿಲ್ಲ. ಒಂದು ವಾಹನವನ್ನು ತಡೆದಾಗ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿಯಲ್ಲ. ಸ್ವತಂತ್ರ ಸ್ಥಳಿಯ ವ್ಯಕ್ತಿಗಳನ್ನು ಪಂಚರಾಗಿ ಕರೆ ತರಲು ಯಾವುದೇ ಪ್ರಯತ್ನ ಮಾಡಿಲ್ಲ ಹಾಗೂ ಯಾವುದೇ ತೊಂದರೆ ಇರಲಿಲ್ಲ. ಸದ್ರಿ ಪಂಚರು ಆ ದಿನ ಕರ್ತವ್ಯದಲ್ಲಿದ್ದರು. ವಾಹನಗಳ ತಪಾಸಣೆ ಮಾಡಿದ ಬಳಿಕಾ ಸಂಬಂಧ ಪಟ್ಟ ವಹಿಗಳಲಿಲ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಆ ದಿನ ಎಷ್ಟು ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ ಎಂದು ವಹಿಯಲ್ಲಿ ನಮೂದಿಸಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಪ್ರಕರಣದ ವಾಹನವನ್ನು ಎಷ್ಟನೇ ಕ್ರಮಾಂಕದಲ್ಲಿ ತಪಾಸಣೆ ಮಾಡಿರುತ್ತೇವೆ ಎಂದು ಹೇಳಲು ಆಗಜವುದಿಲ್ಲ. ರಜಿಸ್ಟರನ ಪ್ರತಿಯನ್ನು ದೋಷರೋಪಣೆ ಪಟ್ಟಿಯೊಂದಿಗೆ ಸಲ್ಲಿಸಿಲ್ಲ.

9. ಪ್ರಕರಣದ ಪಂಚರನ್ನು ಸುಮಾರು 15-20 ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ಸದ್ರಿ ಅವರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರು ಪ್ರಕರಣದಲ್ಲಿ ಬೆಂಬಲಿಸದೇ ಇದ್ದಲ್ಲಿ ಅವರನ್ನು ಕೆಲಸದಿಂದ ತೆಗೆಯುವ ಭೀತಿ ಇರುತ್ತದೆ ಎಂದರೆ ಸರಿಯಲ್ಲ. ಅವರನ್ನು ಅನೇಕ ಬಾರಿ ಕೆಲಸದಿಂದ ತೆಗೆದು ವಾಪಸಾ ತೆಗೆದುಕೊಂಡಿರುವಂತಹ ಸಂದರ್ಭಗಳು ಇರುತ್ತವೆ ಎಂದರೆ ಸರಿಯಲ್ಲ.

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ